2ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಯವರ ನ್ಯಾಯಾಲಯ, ಬೆಂಗಳೂರು ನಗರ
ಸಿ.ಸಿ.ನಂಃ 5554 ಃ 2015

**ಪಿ ಡಬ್ಲ್ಯೂ 4**

ಪ್ರಮಾಣ ವಚನ ಬೋಧಿಸಿದ ದಿನಾಂಕ ಃ 24.03.2026

ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ

ನಾನು ಪಿ.ಯು.ಸಿ ವರೆಗೆ ಓದಿರುತ್ತೇನೆ. ನಮ್ಮ ಕುಟುಂಬದಲ್ಲಿ ನಾವು 4 ಜನ ಶಿರಡಿಗೆ ಹೋಗಿರುತ್ತೇವೆ. ಆರೋಪಿತರು ನಾವು 4 ಜನಕ್ಕೆ ಪ್ರತ್ಯೇಕವಾದ ರಶೀದಿಯನ್ನು ಹಣ ಸಂದಾಯ ಆಗಿರುವ ಬಗ್ಗೆ ಕೊಟ್ಟಿರುತ್ತಾರೆ. ಸದರಿ ದಾಖಲೆಗಳನ್ನು ನಾವು ಪೊಲೀಸರಿಗೆ ಕೊಟ್ಟಿರುತ್ತೇವೆ. ಸದರಿ ರಶೀದಿಯಲ್ಲಿ ನಮ್ಮ ನಾಲ್ಕು ಜನರ ಹೆಸರು ಮತ್ತು ವಿಳಾಸ ಬರೆಯಲಾಗಿತ್ತು. ಆ ಸಮಯದಲ್ಲಿ ಬೆಂಗಳೂರಿನಿಂದ ಶಿರಡಿಗೆ ರೈಲ್ವೆ ಯಲ್ಲಿ ಹೋಗಲು ಎಷ್ಟು ಟಿಕೆಟ್ ನ ಬೆಲೆ ಇದೆ ಎಂಬುದು ನಾವು ವಿಚಾರಣೆ ಮಾಡಿರುವುದಿಲ್ಲ. ನಾವೆಲ್ಲರೂ ಕಂಟ್ರೋಲ್ ಮೆಂಟ್ ರೈಲ್ವೆ ಠಾಣೆಯಲ್ಲಿ ಶಿರಡಿಗೆ ಹೋಗಲು ಹಾಜರಿದ್ದೆವು. ನಮ್ಮ ಜೊತೆ ಸುಮಾರು 900 ಜನ ಪ್ರಯಾಣಿಕರಿದ್ದರು. 200 ರಿಂದ 250 ಜನರನ್ನು ಶಿರಡಿಗೆ ಕರೆದುಕೊಂಡು ಹೋಗಿದ್ದರು. ಬೆಂಗಳೂರು ಬಿಟ್ಟರು ಶಿರಡಿಗೆ ನೇರವಾಗಿ ಹೋಗುವ ರೈಲ್ವೆ ಆಗಿತ್ತು ಮತ್ತು ಆರೋಪಿತರು ಪ್ರತ್ಯೇಕವಾಗಿ ನಮಗಾಗಿ ಒಂದು ರೈಲನ್ನು ಕಾಯ್ದಿರಿಸಲಾಯಿತು ಎಂದರೆ ನಿಜ. ಸದರಿ ರೈಲಿನಲ್ಲಿ ಕಿಚನ್ ಗಾಗಿ ಒಂದು ಬೋಗಿ ಇತ್ತು ಎಂದರೆ ಸರಿ. ಸದರಿ ರೈಲಿನಲ್ಲಿ ಅಡುಗೆ ಸಮಾನು ಮತ್ತು ಅಡುಗೆ ಭಟ್ಟರು ಸಹ ಇದ್ದರು ಎಂದರೆ ನಾನು ನೋಡಿದ್ದು ಇರುವುದಿಲ್ಲ. ಬೆಂಗಳೂರನ್ನು ನಾವು ಬೆಳಿಗ್ಗೆ 10.30 ಗೆ ರೈಲಿನಿಂದ ಬಿಟ್ಟಿರುತ್ತೇವೆ. ಊಟ ಮತ್ತು ತಿಂಡಿ ರೈಲಿನಲ್ಲಿ ವ್ಯವಸ್ಥೆ ಆಗಿತ್ತು ಎಂದರೆ ಸರಿಯಲ್ಲ. ನಾವು ಸುಮಾರು 3 ದಿವಸ ಉಪವಾಸ ಇದ್ದು ಆದರೆ ಹೊರಗಡೆಯಿಂದ ತಿಂಡಿ ತಂದು ತಿಂದಿರುತ್ತೇವೆ. ಆರೋಪಿತರು ಯಾವುದೇ ವ್ಯವಸ್ಥೆ ಮಾಡಿರುವುದಿಲ್ಲ. ಬೆಂಗಳೂರು ಬಿಟ್ಟು ಶಿರಡಿ ಮಧ್ಯದಲ್ಲಿ ಪ್ರಯಾಣಿಕರವನ್ನು ಹತ್ತಿಸುವುದು ಮತ್ತು ಇಳಿಸುವುದಕ್ಕೆ ಯಾವುದೇ ನಿಲ್ದಾಣ ಇರುವುದಿಲ್ಲ. ಮುಂಜಾನೆ 8.30 ಸಮಯಕ್ಕೆ ಶಿರಡಿ ತಲುಪಿದ್ದು ತಲುಪಿದ ದಿನಾಂಕ ನನಗೆ ಈಗ ನೆನಪಿಲ್ಲ. ಶಿರಡಿಯ ರೈಲ್ವೆ ಸ್ಟೇಷನ್ ನಿಂದ ಮಂದಿರವು ಸುಮಾರು 15 ರಿಂದ 20 ಕಿ.ಮೀ ಅಂತರವಿದೆ. ಸುಮಾರು 22 ಬಸ್ ಅನ್ನು ರೈಲ್ವೇ ಸ್ಟೇಷನ್ ನಿಂದ ಮಂದಿರವನ್ನು ತಲುಪಲು ವ್ಯವಸ್ಥೆ ಮಾಡಲಾಗಿತ್ತು ಎಂದರೆ ಸರಿಯಲ್ಲ. ನಾವು ಆಟೋದಲ್ಲಿ ಮಂದಿರಕ್ಕೆ

ಹೋಗಿರುತ್ತೇವೆ. ಆಟೋ ಟಿಕಿಟ್ ಅನ್ನು ನಾವು ಪೊಲೀಸರಿಗೆ ಕೊಟ್ಟಿದ್ದು ಇರುವುದಿಲ್ಲ. ಶಿರಡಿಯಲ್ಲಿ ಲಕ್ಷಾಂತರ ಜನ ಭಕ್ತಾದಿಗಳು ಇರುತ್ತಾರೆ ಎಂದರೆ ಸರಿ. ಅದರಲ್ಲಿ ವಿವಿಐಪಿ ಹೊರತು ಪಡಿಸಿ ಯಾರಿಗೂ ಸಹ ನೇರವಾದ ದರ್ಶನ ಇರುವುದಿಲ್ಲ ಎಂದರೆ ಸರಿ. ನಮ್ಮಲ್ಲಿ ಯಾರು ವಿವಿಐಪಿ ಇದ್ದಿರುವುದಿಲ್ಲ ಎಂದರೆ ಅದರ ಬಗ್ಗೆ ನನಗೆ ಮಾಹಿತಿ ಇಲ್ಲ. ದರ್ಶನಕ್ಕಾಗಿ ಆರೋಪಿತರು ಎಲ್ಲರಿಗೂ ಟಿಕೆಟ್ ಅನ್ನು ಖರೀದಿ ಮಾಡಿದ್ದರು ಎಂದರೆ ಸರಿಯಲ್ಲ. ದರ್ಶನ ಪಡೆಯಲು ಟಿಕೆಟ್ ಕಡ್ಡಾಯವಾಗಿದೆ ಎಂದರೆ ಸರಿ . ಆರೋಪಿತರು ಪ್ರತಿಯೊಬ್ಬರಿಗೂ ಪ್ರತ್ಯೇಕವಾದ ಟಿಕೆಟ್ ಅನ್ನು ದರ್ಶನಕ್ಕಾಗಿ ಕೊಟ್ಟಿದ್ದರು ಎಂದರೆ ಈಗ ನನಗೆ ನೆನಪಿಲ್ಲ. ಅದೇ ಟಿಕೆಟ್ ನಿಂದ ನಾವು ದರ್ಶನ ಮಾಡಿಕೊಂಡು ಬಂದೆವು ಎಂದರೆ ಸರಿಯಲ್ಲ. ಆರೋಪಿತರು ಸುಮಾರು 21 ಲಾಡ್ಜ್ ಗಳನ್ನು ಸಹ ನಮಗೆ ವ್ಯವಸ್ಥೆ ಮಾಡಿದ್ದರು ಎಂದರೆ ಸರಿಯಲ್ಲ . ದರ್ಶನ ಆದ ನಂತರ ಸ್ಟೇಷನ್ ಗೆ ಕರೆದುಕೊಂಡು ಬಂದು ನಂತರ ಬೆಂಗಳೂರಿಗೂ ರೈಲಿನಲ್ಲೆ ಕರೆದುಕೊಂಡು ಬಂದರೆ ಎಂದರೆ ಸರಿಯಲ್ಲ. ಎಲ್ಲಾ ಪ್ರಯಾಣಿಕರಿಗೂ ಅವರದೇ ಆದ ಅಭಿರುಚಿ ಇರುತ್ತದೆ ಎಂದರೆ ಸರಿ. ಸಾಮಾನ್ಯವಾಗಿ ಪ್ರವಾಸಕ್ಕೆ ಹೋದಾಗ ಸಾಮೂಹಿಕವಾಗಿ ಅಡುಗೆ ಮಾಡುತ್ತಾರೆ ಎಂದರೆ ಸರಿ. ಬಿಸ್ಲರಿ ನೀರು ಮತ್ತು ಕಾಫಿ ವ್ಯವಸ್ಥೆ ಸಹ ಮಾಡಿದ್ದರು ಎಂದರೆ ಸರಿಯಲ್ಲ. ಅಡುಗೆ ಭಟ್ಟರು ಎಲ್ಲಾ ವ್ಯವಸ್ಥೆ ಮಾಡಿದ್ದರು ಎಂದರೆ ಸರಿಯಲ್ಲ. ನಮಗೆ ಬೇಕಾದ ಊಟ ಕೊಟ್ಟಿದ್ದು ಇರುವುದಿಲ್ಲ ಎಂದು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಯಾವುದೇಕಾರ್ಯಕ್ರಮದಲ್ಲಿ ಸಣ್ಣಪುಟ್ಟ ತೊಂ ದರೆ ಆಗುತ್ತದೆ ಎಂದರೆ ಸರಿ. ಒಂದು ಟಿಕೆಟ್ 3450/- ರಂತೆ 4 ಜನರ ಹಣವನ್ನು ನಾನು ಕೊಟ್ಟಿರುತ್ತೇನೆ. ಬೆಂಗಳೂರಿನಿಂದ ಶಿರಡಿಗೆ ಆ ಸಮಯದಲ್ಲಿ 1200/- ರೂ ಟಿಕೆಟ್ ಚಾರ್ಜ್ ಇತ್ತು ಎಂದರೆ ನನಗೆ ಗೊತ್ತಿಲ್ಲ. ನಾವು ಹೊರಗಡೆ ತಿಂದ ತಿಂಡಿ ಮತ್ತು ಕಾಫಿಗಾಗಿ ಖರೀದಿ ಮಾಡಿದ ರಶೀದಿಗಳನ್ನು ತನಿಖಾಧಿಕಾರಿಗಳಿಗೆ ಕೊಟ್ಟಿದ್ದು ಇರುವುದಿಲ್ಲ ಎಂದರೆ ಸರಿಯಲ್ಲ. ಲಾಡ್ಜ್ ನ ವ್ಯವಸ್ಥೆ ಆಗಿದ್ದು ನಾವು ಅಲ್ಲಿಯೇ ತಂಗಿದ್ದೆವು ಎಂದರೆ ಸರಿಯಲ್ಲ. ನಾವು ಪ್ರತ್ಯೇಕವಾಗಿ ರೂಮನ್ನು ಮಾಡಿಕೊಂಡಿದ್ದು ಇರುವುದಿಲ್ಲ. ನಾವು 4 ಜನ ಹೊರತುಪಡಿಸಿ ಬೇರೆ ಯಾರನ್ನೂ ಸಹ ನಾವು ಕರೆದುಕೊಂಡು ಹೋಗಿರುವುದಿಲ್ಲ. ನಾವು 4 ಜನ ಇದ್ದು ಆರೋಪಿತರಿಗೆ ವಿನಾಯಿತಿ ಕೇಳಿದ್ದು ಅವರು ಕೊಡದೇ ಇದ್ದುದ್ದರಿಂದ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ಎಲ್ಲರಿಗೂ ಸಮಾನವಾದ

ವ್ಯವಸ್ಥೆ ಮಾಡಿದ್ದರು ಎಂದರೆ ಸರಿಯಲ್ಲ. ಬೇರೆಯವರಿಗೆ ಬೇರೆ ಬೇರೆ ತಿಂಡಿ ವ್ಯವಸ್ಥೆ ಮಾಡಿದ್ದರು ದುರುದ್ದೇಶದಿಂದ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯು ಎಲ್ಲಾ ವ್ಯವಸ್ಥೆ ಮಾಡಿದ್ದರು ಸಹ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರಿಗೆ ನಾನು ಬರವಣಿಗೆಯಲ್ಲಿ ದೂರನ್ನು ಖುದ್ದಾಗಿ ಬಸವನಗುಡಿ ಪೊಲೀಸ್ ಠಾಣೆಯಲ್ಲಿ ಕೊಟ್ಟಿರುತ್ತೇನೆ. ಕಂಟೋನ್ ಮೆಂಟ್ ರೈಲ್ವೆ ಇಳಿದಿದ್ದು ಅಲ್ಲಿ ಹೈಗ್ರೌಂಡ್ ಪೊಲೀಸ್ ಠಾಣೆಗೆ ದೂರು ಕೊಡಬಹುದಿತ್ತು ಎಂದರೆ ಸಾಕ್ಷಿ ನನಗೆ ದೂರು ಕೊಡುವ ಮಾಹಿತಿ ಇರಲಿಲ್ಲ ಎಂದು ನುಡಿಯುತ್ತಾರೆ. ಪೊಲೀಸರ ನನ್ನ ಹೇಳಿಕೆ ಪಡೆದುಕೊಂಡ ಬಗ್ಗೆ ಈಗ ನನಗೆ ನೆನಪಿಲ್ಲ. ನಮ್ಮ ನಾಲ್ಕು ಜನರನ್ನು ಸಹ ಪೊಲೀಸರು ಕರೆದಿದ್ದು ಇರುವುದಿಲ್ಲ. ನಮ್ಮ 4 ಜನರು ಖುದ್ದಾಗಿ ಪೊಲೀಸ್ ಠಾಣೆಗೆ ಹೋಗಿ ಹೇಳಿಕೆ ನೀಡಿಲ್ಲ. ನ್ಯಾಯಾಲಯದಲ್ಲಿಯೂ ಸಹ ನನ್ನ ಕುಟುಂಬದವರು ಇಲ್ಲಿಯವರೆಗೂ ಯಾವುದೇ ಸಾಕ್ಷಿ ಹೇಳಿರುವುದಿಲ್ಲ. ನಾವು 4 ಜನರು ಕಮಿಷನ್‌ಗಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

( ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸ ಇದೆ

(ಸಾಹೀಲ್ ಅಹ್ಮದ್ ಎಸ್ ಕುನ್ನಿಭಾವಿ)
2ನೇ ಅ ಮು ಮ ದಂ